ಬ್ಯಾಂಕ್ ಪ್ರಕರಣಗಳು, ಭೂಸ್ವಾದೀನ ಪ್ರಕರಣಗಳನ್ನು ಹಾಗೂ ಕಾರ್ಮಿಕ ವಿವಾದ ಪ್ರಕರಣಗಳನ್ನು ತರುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಇದಲ್ಲದೇ ಕಾನೂನು ನೆರವು ಕಾರ್ಯಕ್ರಮಗಳ ಪ್ರಯೋಜನ ಹೆಚ್ಚು ಜನರಿಗೆ ಕಲ್ಪಿಸುವ ಉದ್ದೇಶದಿಂದ ಕಾನೂನು ವಿದ್ಯಾಪ್ರಸಾರ ಕಾರ್ಯಕ್ರಮಗಳನ್ನು ತೀವ್ರಗೊಳಿಸಲಾಗುತ್ತಿದೆ.

ಡೀಸಲ್ ಮತ್ತು ಪೆಟ್ರೋಲ್ ಬಳಕೆ ಕುರಿತು

450(660). ಶ್ರೀ ಜಿ. ರಾಜುಗೌಡ (ಹನೂರು):- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಕಳೆದ ವರ್ಷಕ್ಕಿಂತ ಈ ವರ್ಷ ಡೀಸೆಲ್ ಮತ್ತು ಪೆಟ್ರೋಲ್ ಬಳಕೆ ಶೇಕಡಾ ಎಷ್ಟು ಹೆಚ್ಚಾಗಿರುತ್ತದೆ?

ಆ) ನಕಲಿ ಲೂಬ್ರಿಕೇಟ್ ತೈಲ ಮತ್ತು ಗ್ರೀಸ್ ಮಾರಾಟದಿಂದ ಉಂಟಾಗಿರುವ ದುಷ್ಪರಿಣಾಮಗಳು ಯಾವುವು? ಇದನ್ನು ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ) ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಈ ವರ್ಷ ಪೆಟ್ರೋಲ್ ಮತ್ತು ಡೀಸೆಲ್ ಬಳಕೆ ಕ್ರಮವಾಗಿ ಶೇಕಡ 2.1 ಮತ್ತು 5.3 ರಷ್ಟು ಹೆಚ್ಚಾಗಿರುತ್ತದೆ.

ಆ) ನಕಲಿ ಲೂಬ್ರಿಕೇಟಿಂಗ್ ತೈಲ ಮತ್ತು ಗ್ರೀಸ್ ಮಾರಾಟದಿಂದ ಹಾಗೂ ಅವುಗಳನ್ನು ಯಂತ್ರಗಳಿಗೆ ಬಳಸುವುದರಿಂದ ಯಂತ್ರೋಪಕರಣಗಳು ಹಾಳಾಗುತ್ತವೆ, ಹಾಗೂ ಉತ್ಪಾದನೆಯು ನಷ್ಟದಲ್ಲಿ ಪರಿಣಮಿಸುವುದು, ಅಲ್ಲದೆ ಇದನ್ನು ಉಪಯೋಗಿಸುವುದರಿಂದ ಇಂತಹ ಯಂತ್ರಗಳ ಸಂಪರ್ಕ ಹೊಂದುವವರ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಬೀರುತ್ತವೆ. ಈ ತೈಲಗಳನ್ನು ಯಂತ್ರಗಳಿಗೆ ಹಾಗೂ ವಾಹನಗಳಿಗೆ ಬಳಸಿದಲ್ಲಿ ಪರಿಸರ ಮಾಲಿನ್ಯವು ಸಹ ಉಂಟಾಗುತ್ತದೆ. ಇಂತಹ ನಕಲಿ ತೈಲಗಳನ್ನು ಉಪಯೋಗಿಸುವುದನ್ನು ತಡೆಗಟ್ಟಲು ಕೇಂದ್ರ ಸರ್ಕಾರವು ಆಗತ್ಯ ವಸ್ತುಗಳ ಕಾಯಿದೆ ೧೯೫೫ರ ಆಡಿಯಲ್ಲಿ ಲೂಬ್ರಿಕೇಟಿಂಗ್ ತೈಲ ಮತ್ತು ಗ್ರೀಸ್ ನಿಯಂತ್ರಣ ಆದೇಶವನ್ನು ಹೊರಡಿಸಿದ್ದು, ಇಂತಹ ತೈಲಗಳಲ್ಲಿ ವ್ಯವಹರಿಸಲು ಇಚ್ಛಿಸುವ ವ್ಯಕ್ತಿ ನಿರ್ದೇಶಕು, ಕೈಗಾರಿಕೆ ಮತ್ತು ವಾಣಿಜ್ಯ ಇವರಿಂದ ಆಗತ್ಯ ಲೈಸೆನ್ಸ್ ಪಡೆಯಲೇ ಬೇಕಾಗುತ್ತದೆ. ಆದರೆ, ಕರ್ನಾಟಕದ ಉಚ್ಛ ನ್ಯಾಯಾಲಯವು ಸದರಿ ಕೇಂದ್ರ ಸರ್ಕಾರದ ಆದೇಶಕ್ಕೆ ತಡೆಯಾಜ್ಞೆಯನ್ನು ನೀಡಿರುತ್ತದೆ.

ಮೈಸೂರು ಮತ್ತು ತುಮಕೂರು ಜಿಲ್ಲೆಗೆ ವಿದ್ಯುತ್ ಸರಬರಾಜು ಮಾಡಿದ ಪಂಪುಸೆಟ್ಟುಗಳ ಸಂಖ್ಯೆ

452(667). ಶ್ರೀ ಜಿ. ರಾಜುಗೌಡ (ಹನೂರು):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಮೈಸೂರು ಮತ್ತು ತುಮಕೂರು ವಿದ್ಯುಚ್ಛಕ್ತಿ ವಲಯಗಳಲ್ಲಿ ಬರುವ ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಲಾಗಿದೆ?

ಆ) 1ನೇ ಏಪ್ರಿಲ್ 1991 ರಿಂದ 31ನೇ ಜನವರಿ 1992ರವರೆಗೆ ಇದಕ್ಕಾಗಿ ಎಷ್ಟು ಯೂನಿಟ್ ವಿದ್ಯುಚ್ಛಕ್ತಿ ಸರಬರಾಜಾಗಿದೆ?

ಇ) ರೈತರಿಗೆ ವಿದ್ಯುತ್ತನ್ನು ರಿಯಾಯಿತಿ ದರದಲ್ಲಿ ಕೊಡುತ್ತಿರುವುದರಿಂದ ಸರ್ಕಾರದಿಂದ ವಿದ್ಯುಚ್ಛಕ್ತಿ ಮಂಡಳಿಯು ಮೇಲ್ಕಂಡ ಎರಡು ವಲಯಗಳಿಗಾಗಿ ಎಷ್ಟು ಸಹಾಯಧನ ಪಡೆದುಕೊಂಡಿದೆ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):-

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಮೈಸೂರು ಕಾರ್ಯ ಮತ್ತು ಪಾಲನಾ ವೃತ್ತದ ವ್ಯಾಪ್ತಿಗೆ ಮೈಸೂರು, ಮಂಡ್ಯ, ಕೊಡಗು ಮತ್ತು ಹಾಸನ ಜಿಲ್ಲೆಗಳು ಸೇರಿದ್ದು, ತಾಲ್ಲೂಕುವಾರು ನೀರಾವರಿ ಪಂಪುಸೆಟ್ಟುಗಳ ಸಂಖ್ಯೆಗಳ ವಿವರಗಳು ಈ ಕೆಳಕಂಡಂತಿದೆ:-

ಕ್ರಮ ಸಂಖ್ಯೆ	ತಾಲ್ಲೂಕು	31-1-1992ರಲ್ಲಿರುವಂತೆ ನೀರಾವರಿ ಪಂಪುಸೆಟ್ಟುಗಳ ಒಟ್ಟು ಸಂಖ್ಯೆ
	ಮೈಸೂರು ಜಿಲ್ಲೆ	
1.	ಮೈಸೂರು	2,707
2.	ನಂಜನಗೂಡು	3,196
3.	ಚಾಮರಾಜನಗರ	7,466
4.	ಯಳಂದೂರು	1,341
5.	ಟಿ. ನರಸೀಪುರ	2,434
6.	ಕೊಳ್ಳೇಗಾಲ	8,425
7.	ಗುಂಡ್ಲುಪೇಟೆ	4,063
8.	ಕೆ.ಆರ್. ನಗರ	858
9.	ಹುಣಸೂರು	1,943
10.	ಪಿರಿಯಾಪಟ್ಟಣ	1,011
11.	ಹೆಗ್ಗಡದೇವನಕೋಟೆ	1,566
	ಮಂಡ್ಯ ಜಿಲ್ಲೆ	
1.	ಮಂಡ್ಯ	3,657
2.	ಮದ್ದೂರು	2,779
3.	ಮಳವಳ್ಳಿ	4,447
4.	ಕೃಷ್ಣರಾಜಪೇಟೆ	2,423
5.	ನಾಗಮಂಗಲ	1,999
6.	ಪಾಂಡವಪುರ	2,213
7.	ಶ್ರೀರಂಗಪಟ್ಟಣ	893
	ಕೊಡಗು ಜಿಲ್ಲೆ	
1.	ಮಡಿಕೇರಿ	498
2.	ಸೋಮವಾರ ಪೇಟೆ	1,256
3.	ವೀರರಾಜಪೇಟೆ	1,215
	ಹಾಸನ ಜಿಲ್ಲೆ	
1.	ಆಲೂರು	330
2.	ಅರಕಲಗೂಡು	1,555
3.	ಬೇಲೂರು	2,084
4.	ಹಾಸನ	1,850
5.	ಸಕಲೇಶಪುರ	778
6.	ಅರಸೀಕೆರೆ	3,246
7.	ಚನ್ನರಾಯಪಟ್ಟಣ	4,761
8.	ಹೊಳೆನರಸೀಪುರ	585
	ಒಟ್ಟು	71,579

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ತುಮಕೂರು ವೃತ್ತದ ವ್ಯಾಪ್ತಿಗೆ ತುಮಕೂರು ಮತ್ತು ಕೋಲಾರ ಜಿಲ್ಲೆಗಳು ಸೇರಿದ್ದು, ತಾಲ್ಲೂಕುವಾರು ನೀರಾವರಿ ಪಂಪುಸೆಟ್ಟುಗಳ ವಿವರಗಳು ಈ ಕೆಳಕಂಡಂತಿವೆ.

1	2	3
	ತುಮಕೂರು ಜಿಲ್ಲೆ	
1.	ತುಮಕೂರು ಜಿಲ್ಲೆ	10,041
2.	ಗುಬ್ಬಿ	11,068
3.	ತಿಪಟೂರು	7,287
4.	ತುರುವೇಕೆರೆ	4,580
5.	ಚಿಕ್ಕನಾಯಕನಹಳ್ಳಿ	5,343
6.	ಕುಣಿಗಲ್	5,416
7.	ಮಧುಗಿರಿ	12,254
8.	ಶಿರಾ	9,090
9.	ಪಾವಗಡ	6,858
10.	ಕೊರಟಗೆರೆ	5,691
	ಕೋಲಾರ ಜಿಲ್ಲೆ	
1.	ಕೋಲಾರ	10,174
2.	ಬಂಗಾರಪೇಟೆ	8,823
3.	ಚಿಂತಾಮಣಿ	11,541
4.	ಬಾಗೇಪಲ್ಲಿ	5,453
5.	ಚಿಕ್ಕಬಳ್ಳಾಪುರ	10,079
6.	ಗೌರೀಬಿದನೂರು	11,237
7.	ಗುಡಿಬಂಡೆ	2,294
8.	ಮಾಲೂರು	7,972
9.	ಮುಳಬಾಗಿಲು	7,023
10.	ಶಿಡ್ಲಘಟ್ಟ	10,690
11.	ಶ್ರೀನಿವಾಸಪುರ	6,757
	ಒಟ್ಟು	1,69,671

ಅ) 621.44 ದಶಲಕ್ಷ ಯೂನಿಟ್‌ನಷ್ಟು ವಿದ್ಯುಚ್ಛಕ್ತಿ ಸರಬರಾಜಾಗಿದೆಯೆಂದು ಲೆಕ್ಕಾಚಾರ ಮಾಡಲಾಗಿದೆ.

ಇ) ಸರ್ಕಾರದಿಂದ ಕೊಡಲಾಗುವ ಗ್ರಾಮೀಣ ವಿದ್ಯುದ್ದೀಕರಣದ ನಷ್ಟದ ಬಗ್ಗೆ ಸಹಾಯಧನವು ವಿಭಾಗೀಯ ಮತ್ತು ವೃತ್ತ ಮಟ್ಟದ್ದಾಗಿರುವುದಿಲ್ಲ, ಆದರೆ ಇದುವರೆಗೆ ಒಟ್ಟಾರೆ 45 ಕೋಟಿ ರೂಪಾಯಿಗಳ ಸಹಾಯಧನವನ್ನು ಗ್ರಾಮೀಣ ವಿದ್ಯುದ್ದೀಕರಣ ನಷ್ಟದ ಬಗ್ಗೆ ಸರ್ಕಾರದಿಂದ 1991-92ರಲ್ಲಿ ಬಂದಿರುತ್ತದೆ. ಕೃಷಿ ನೀರಾವರಿ ಸ್ಥಾವರಗಳ ಸಂಖ್ಯೆಯನ್ನು ಆವಲಂಬಿಸಿ ಈ ಕೆಳಕಂಡ ಸಹಾಯಧನವನ್ನು ವೃತ್ತಗಳಿಗೆ ಹಂಚಿಲಾಗಿದೆ.

ತುಮಕೂರು ವೃತ್ತ -4.46 ಕೋಟಿ ರೂ.ಗಳು

ಮೈಸೂರು ವೃತ್ತ -1.98 ಕೋಟಿ ರೂ.ಗಳು